ದಿ.28.10.2024 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎನ್.ಡಿ ವಕೀಲರಿಂದ.**

6. ಅಸಲು ದಾವೆಯ ಸಂಖ್ಯೆ 29/2015 ರಲ್ಲಿ ವಾದಿಯು ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದು ಹೇಳಿ ವಜವಾಗಿರುತ್ತದೆ ಎಂದರೆ ಸರಿ. ಕೃಷ್ಣಮೂರ್ತಿ ಮತ್ತು ಲಕ್ಷಣಪ್ಪನವರ ಜಂಟಿ ಖಾತೆಯಲ್ಲಿದ್ದಂತಹ ಆಸ್ತಿಯನ್ನು 02 ನೇ ಪ್ರತಿವಾದಿ ನಮ್ಮ ಗಮನಕ್ಕೆ ಬರದೆ ಅವರ ಹೆಸರಿಗೆ ಬದಲಾವಣೆ ಮಾಡಿಕೊಂಡಿರುತ್ತಾರೆ. 02 ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿದೆ ಎಂದು ಹೇಳುವ ಆಸ್ತಿಯಲ್ಲಿ ಈಗ ಅಡಿಕೆ ತೋಟವಿರುತ್ತದೆ. ಸರ್ವೆ ನಂ. 137 ನನ್ನ ಮಾವನ ಸ್ವಂತ ಆಸ್ತಿಯೆಂದರೆ ಸರಿ. 2012-13 ನೇ ಸಾಲಿನಲ್ಲಿ 02 ನೇ ಪ್ರತಿವಾದಿಗೆ ಆಸ್ತಿ ವರ್ಗಾವಣೆಯಾಗಿರಬಹುದು. 02 ನೇ ಪ್ರತಿವಾದಿಗೆ ನಾನು ರಂಗಪ್ಪನ ಹೆಂಡತಿ ಎಂದು ಗೊತ್ತೆ ಇಲ್ಲ ಎಂದರೆ ಸರಿಯಲ್ಲ. ನನ್ನ ಮಾವ ಸ್ವಂತ ಇಚ್ಚೆ ಯಿಂದ ಅಪೇಕ್ಷೆ ಪಟ್ಟು 01 ಎಕರೆ 01 ಗುಂಟೆ ಜಮೀನನ್ನು 01 ನೇ ಪ್ರತಿವಾದಿ ಕೃಷ್ಣಮೂರ್ತಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ. 01 ಲಕ್ಷಣಪ್ಪನವರ ಸ್ವಂತ ಆಸ್ತಿ ಎಂದರೆ ಸರಿ. ಲಕ್ಷಣಪ್ಪ ಸತ್ತ ನಂತರ ಕೃಷ್ಣಮೂರ್ತಿ ಬೇರೆ ವಾಸ ಮಾಡುತ್ತಿದ್ದರು, ರಂಗಪ್ಪ ಎಲ್ಲಿದ್ದರು ಎಂದು ಅವರ ತಂದೆ ತಾಯಿಗೆ ಗೊತ್ತಿರಲಿಲ್ಲ, 03 ನೇ ವಾದಿ ಚಂದ್ರಪ್ಪ ಮತ್ತು ನಾವು ಕೆಲಸ ಹುಡುಕುತ್ತ ಬೆಂಗಳೂರಿನಲ್ಲಿ ವಾಸವಾಗಿದ್ದೇವು ಎಂದರೆ ಸರಿಯಲ್ಲ. ಪ್ರತಿವಾದಿ ಗಳ ತಾಯಿ ತನ್ನ ಗಂಡ ಆಸ್ತಿಗಳಿಂದ ಬರುತ್ತಿದ್ದ ಆದಾಯದಿಂದ ಜೀವನ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಗಳ ತಾಯಿ ಒಬ್ಬರೆ ಇದ್ದ ಕಾರಣ ಅವರಿಗೆ ಆಸ್ತಿಗಳನ್ನು ಒಬ್ಬರೆ ನೋಡಿಕೊಳ್ಳಲು ಆಗುತ್ತಿರಲಿಲ್ಲ. ಪ್ರತಿವಾದಿಗಳ ತಾಯಿ ವೃಂದಮ್ಮ 01 ನೇ ಪ್ರತಿವಾದಿಗೆ ದಾನಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 2019 ನೇ ಇಸವಿಯಿಂದ 01 ನೇ ಪ್ರತಿವಾದಿ ದಾವಾಸ್ವತ್ತಿನಲ್ಲಿ ಐಟಂ ನಂ.01 ರಲ್ಲಿ ಸ್ವಾಧೀನವಿದ್ದು ಅನುಭವಿಸುತ್ತಿರುತ್ತಾರೆ ಎಂದರೆ ಸರಿಯಲ್ಲ. ವೃಂದಮ್ಮನವರಿಗೆ ಇದ್ದ 03 ಜನ ಗಂಡು ಮಕ್ಕಳು ಅವರನ್ನು ತೊರೆದಿದ್ದ ಕಾರಣ ವಿಧಿಇಲ್ಲದೆ ಅವರ ಮಗಳಾದ ಶಾರದಮ್ಮನವರ ಮನೆಗೆ

ಹೋಗಿರುತ್ತಾರೆ ಎಂದರೆ ಸರಿಯಲ್ಲ. 01 ನೇ ಪ್ರತಿವಾದಿ ಶಾರದಮ್ಮ ದಾವಾಸ್ವತ್ತಗಳನ್ನು ನೋಡಿಕೊಳ್ಳುತ್ತಿದ್ದರು ಮತ್ತು ಅವರೇ ಸಾಗುವಳಿ ಮಾಡಲು ಹಣವನ್ನು ವ್ಯಯ್ಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. 01 ನೇ ಪ್ರತಿವಾದಿ ಖಾತಾ ಬದಲಾವಣೆ ಮಾಡಿಕೊಳ್ಳಲು ಯಾವಾಗ ಅರ್ಜಿ ಕೊಟ್ಟಿದ್ದರು ನನಗೆ ಗೊತ್ತಿಲ್ಲ. ತಹಶೀಲ್ದಾರ್ ಕಚೇರಿಯಿಂದ ನನಗೆ ಯಾವುದೇ ನೋಟಿಸ್ ಬಂದಿರುವುದಿಲ್ಲ , ಆದರೆ ನಾವೇ ತಹಶೀಲ್ದಾರ್ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೆ, ಖಾತೆ ಮಾಡಬಾರದು ಎಂದುಹೇಳಿ ತಕರಾರು ಸಲ್ಲಿಸಿದ್ದೆ ಎಂದರೆ ಸರಿ. ತಕರಾರು ಅರ್ಜಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ ಎಂದರೆ ಸರಿ. ನನಗೂ ಮತ್ತು ಪ್ರತಿವಾದಿಗಳ ಕುಟುಂಬಕ್ಕೂ ಯಾವುದೇ ಸಂಬಂಧವಿಲ್ಲದೆ ಇದ್ದರೂ ಸಹ ನಾನು ಖಾತೆ ಬದಲಾವಣೆಯಾಗಬಾರದೆಂದು ಅರ್ಜಿ ಕೊಟ್ಟಿದ್ದೆ ಎಂದರೆ ಸರಿಯಲ್ಲ. ವೃಂದಮ್ಮನವರು ಸೀತಾರಾಮಪುರದಲ್ಲಿ ಸುಸ್ತಾಗಿ ಮೃತ ಪಟ್ಟಿರುತ್ತಾರೆ. ವೃಂದಮ್ಮನವರಿಗೆ ಏಕಾಏಕಿ ರಕ್ತದೊತ್ತಡ ಹೆಚ್ಚಾಗಿ 01 ನೇ ಪ್ರತಿವಾದಿ ಯವರ ಮನೆಯಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ವೃಂದಮ್ಮನವರು ಗಟ್ಟಿಮುಟ್ಟಾಗಿದ್ದರು ಎಂದರೆ ಸರಿ. ವೃಂದಮ್ಮನವರಿಗೆ ಸಾಮಾಜಿಕ ವ್ಯವಸ್ಥೆಯ ಬಗ್ಗೆ ತಿಳುವಳಿಕೆ ಇತ್ತು ಮತ್ತು ಮನೆಯನ್ನು ನಿರ್ವಹಣೆ ಮಾಡುವ ಶಕ್ತಿ ಇತ್ತು ಎಂದರೆ ಸರಿಯಲ್ಲ. 2019 ನೇ ಇಸವಿಯಿಂದ ನನ್ನ ಜೊತೆಯಲ್ಲೆ ವೃಂದಮ್ಮನವರು ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೃಂದಮ್ಮನವರಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ತೋರಿಸಿಕೊಂಡು ಬರುತ್ತಿದ್ದೆ, ಆದರೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ವೃಂದಮ್ಮನವರಿಗೆ ಮೃತಪಡುವ ಸಮಯದಲ್ಲಿ ಅವರು ದೃಢಕಾಯರಾಗಿದ್ದರು ಮತ್ತು ಮಾನಸಿಕವಾಗಿ ಚೆನ್ನಾಗಿದ್ದರು ಎಂದರೆ ಸರಿಯಲ್ಲ. ವೃಂದಮ್ಮನವರಿಗೆ ಯಾರಾದರು ಓದಿ ಹೇಳಿದರೆ ಮತ್ತು ತಿಳಿಸಿ ಹೇಳಿದರೆ ಅವರಿಗೆ ಅರ್ಥವಾಗುತ್ತಿತ್ತು ಎಂದರೆ ಸರಿ. ವೃಂದಮ್ಮನವರು ಬರೆದುಕೊಟ್ಟ ದಾನಪತ್ರವನ್ನು ಛಾಲೆಂಜ್ ಮಾಡಲು ನಮಗೆ ಯಾವುದೇ ಅಧಿಕಾರವಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವೃಂದಮ್ಮನವರ ಜೊತೆಯಲ್ಲಿ ಇದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವೃಂದಮ್ಮನ ಕೊನೆಯ ದಿನಗಳಲ್ಲಿ 01ನೇ ಪ್ರತಿವಾದಿ ಶಾರದಮ್ಮನವರೇ ಅವರ ಯೋಗಕ್ಷೇಮವನ್ನು ನೋಡಿ ಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. 01 ನೇ ಪ್ರತಿವಾದಿಯು ದಾವಾ ಐಟಂ 01 ರಲ್ಲಿ ಅಡಿಕೆ ತೋಟವನ್ನು ಸಂರಕ್ಷಣೆ ಮಾಡಲು ಹೆಚ್ಚು ಹಣವನ್ನು ಖರ್ಚು ಮಾಡಿದ್ದರು ಎಂದರೆ ಸರಿಯಲ್ಲ. ದಾವಾಸ್ತಿಗಳಲ್ಲಿ ಸಮಪಾಲು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಮಕ್ಕಳು ಪ್ರತಿವಾದಿಗಳ ಕುಟುಂಬದ ಸದಸ್ಯರಾಗದೆ ಇರುವ ಕಾರಣ  ಪಾಲು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. 01 ನೇ ಪ್ರತಿವಾದಿಗೆ  ತೊಂದರೆ ಕೊಡುವ ಉದ್ದೇಶದಿಂದ ಆಗಾಗ ಅಡಿಕೆ ಫಸಲನ್ನು  ಕೀಳಲು ಪ್ರಯತ್ನ ಪಡುತ್ತಿರುತ್ತೇನೆದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಸ್ವಾಧೀನ ಇರುತ್ತೇನೆಂದು ಹೇಳಿರುತ್ತಾರೆ.  ನಾನು ಮದುವೆಯಾಗಿದ್ದೇನೆಂದು ಹೇಳುವ ದಿವಸದಿಂದ ವೃಂದಮ್ಮ ಮತ್ತು ಅವರ ಗಂಡ ನನ್ನನ್ನು ಮನೆಗೆ ಸೇರಿಸಿರುವುದಿಲ್ಲ ಹಾಗಾಗಿ ನಾನು ಬೆಂಗಳೂರಿನಲ್ಲೆ ವಾಸವಾಗಿರುತ್ತೇನೆಂದರೆ ಸರಿಯಲ್ಲ. ನಾನು ಕಳೆದ 25 ವರ್ಷಗಳಿಂದ ದಾವಾಸ್ತಿಯಲ್ಲಿ ಸ್ವಾಧೀನದಲ್ಲಿರುತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2.  ನಾನು ವಾಸವಾಗಿರುವ  ಒಂದು ಮನೆಯನ್ನು ಮಾತ್ರ  ಲಕ್ಷಣಪ್ಪನವರು ಕಟ್ಟಿಸಿರುತ್ತಾರೆ. ಈ ಮನೆಯಲ್ಲೆ ಲಕ್ಷಣಪ್ಪನವರು ಮೃತಪಟ್ಟಿರುತ್ತಾರೆ. ಸದರಿ ಮನೆಯ ಖಾತೆ ನಂಬರ್ ನನ್ನ ಬಳಿ ಇರುವುದಿಲ್ಲ. ಲಕ್ಷಣಪ್ಪನವರು ಕಟ್ಟಿಸಿದ್ದಂತಹ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸದರಿ ಮನೆಯನ್ನು ಯಾರು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುವುದಿಲ್ಲ, ಅದು ಈಗಲು ಲಕ್ಷ್ಮಣಪ್ಪನವರ ಹೆಸರಿಗಿರುತ್ತದೆ ಎಂದರೆ ಸರಿಯಲ್ಲ. ಈ ಮನೆಯ ಮೇಲೆ ನನಗೂ ಮತ್ತು ನನ್ನ ಮಕ್ಕಳಿಗೂ ಅಧಿಕಾರ  ಮತ್ತು ಯಾವುದೇ ಪಾಲು ಇರುವುದಿಲ್ಲ  ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳ ಆಧಾರದ ಮೇಲೆ ಈ ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾನು ಯಾವುದೇ ಆಸ್ತಿಯಲ್ಲಿ

ಸಾವಧೀನದಲ್ಲಿರುವುದಿಲ್ಲ ಮತ್ತು ದಾವಾಸ್ವತ್ತಿನಲ್ಲಿ ನನ್ನ ಹಕ್ಕಿರದೆ ಇರುವ ಕಾರಣ ನಾನು ಯಾವುದೇ ಪರಿಹಾರ ಕೇಳಲು ಅರ್ಹಳಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ